# ವಿಡಿಐಟಿಗೆ ನೌಕಾನೆಲೆ ಅಧಿಕಾರಿಗಳ ಭೇಟಿ




**ಕೊಂಕಣವಾಹಿನಿ ನ್ಯೂಸ್,**
**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳಕ್ಕೆ ಭಾರತೀಯ ನೌಕಾನೆಲೆ ಕಾರವಾರ ವಿಭಾಗದ ಕಮಾಂಡಿಂಗ್ ಆಫೀಸರ್ ಕ್ಯಾಪ್ಟನ್ ವಿ. ಎಸ್. ಗುರು ಅವರು ಶುಕ್ರವಾರ ಭೇಟಿ ನೀಡಿದರು. ಮಹಾವಿದ್ಯಾಲಯವು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕೈಗೊಂಡಿರುವ ಹಲವು ಉಪಕ್ರಮಗಳ ಕುರಿತಾಗಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ವಿವರಿಸಿದರು. ಕ್ಯಾಪ್ಟನ್ ವಿ. ಎಸ್. ಗುರು ಅವರು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನೌಕಾ ನೆಲೆಗಳಲ್ಲಿ ಇರುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಕ್ಯಾಪ್ಟನ್ ವಿನೀತ್ ಕುಮಾರ್, ಲೆಫ್ಟಿನೆಂಟ್ ಶರತ್ ರಾಜೇಂದ್ರ ಉಪಸ್ಥಿತರಿದ್ದರು. ಭಾರತೀಯ ನೌಕಾನೆಲೆ ಕಾರವಾರ ವಿಭಾಗದ ಈ ಅಧಿಕಾರಿಗಳು ಮಹಾವಿದ್ಯಾಲಯದ ತಾಂತ್ರಿಕ ವಸ್ತು ಸಂಗ್ರಹಾಲಯ "ಜಾಗೃತಿ", ಟೊಯೋಟಾ ಕಿರ್ಲೋಸ್ಕರ್‌ನ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯಾರ್ಥಿ ಗಳೊಂದಿಗೆ ಸಂವಾದ ನಡೆಸಲಾಯಿತು.

ಉತ್ತರ ಕನ್ನಡ ಜಿಲ್ಲಾಡಳಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳಿಗೆ ನೌಕಾ ನೆಲೆಯಲ್ಲಿನ ಉದ್ಯೋಗಾವಕಾಶಗಳ ಕುರಿತಾಗಿ ಮಾಹಿತಿ ವಿನಿಮಯಕ್ಕೆ ಈ ಕಾರ್ಯಕ್ರಮ ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಹಳಿಯಾಳ ತಹಶೀಲ್ದಾರ ಪ್ರವೀಣ್ ಹುಚ್ಚಣ್ಣವರ ಹಾಗೂ ದಾಂಡೇಲಿಯ ತಹಶೀಲ್ದಾರ ಶೈಲೇಶ್ ಪರಮಾನಂದ, ರಜತ್ ಹಬ್ಬು, ಸಹಾಯಕ ನಿರ್ದೇಶಕರು ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಕೇಂದ್ರ, ಕಾರವಾರ, ಡಿ ಟಿ ನಾಯ್ಕ್, ಜಿಲ್ಲಾ ಕೌಶಲ್ಯಭಿವೃದ್ಧಿ ಅಧಿಕಾರಿ , ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಪ್ರೊ. ಎಸ್ ಡಿ ಕುಲಕರ್ಣಿ ಸ್ವಾಗತಿಸಿದರು. ಪ್ರೊ ರಜತ್ ಆಚಾರ್ಯ ಮತ್ತು ಪ್ರೊ ನವೀನ್ ಹಿರೇಮಠ್ ಸಂಯೋಜಿಸಿದ್ದರು.

ಎಲ್ಲಾ ವಿಭಾಗದ ಡೀನ್ ಗಳು, ವಿಭಾಗ ಮುಖ್ಯಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.